ಸೆಲೆಬ್ರಿಟಿ ■ ಹನಿ

# ಶ್ರೀಮಂತ ಮಹಿಳೆ ಶೆರಿಲ್

2014ರ ಕೊನೆಗೆ ಫೇಸ್‌ಬುಕ್ ಜನಪ್ರಿಯತೆ ಕುಸಿಯುತ್ತಿದೆ ಎನ್ನುವ ವರದಿಗಳ ಮಧ್ಯೆಯೇ, ಅದರ ಮುಖ್ಯ ನಿರ್ವಹಣಾ ಅಧಿಕಾರಿ (ಸಿಓಓ) ಶೆರಿಲ್ ಸ್ಯಾಂಡ್‌ಬರ್ಗ್ ಆಸ್ತಿ ಮೌಲ್ಯ ಸಿಕ್ಕಾಪಟ್ಟೆ ಏರಿಕೆಯಾಗಿದೆ. ಈ ವರ್ಷ ತಂತ್ರಜ್ಞಾನ ಉದ್ಯಮದಲ್ಲಿ ಅತ್ಯಂತ ಹೆಚ್ಚು ಆದಾಯ ಪಡೆದ ಮಹಿಳೆಯಾಗಿ ಶೆರಿಲ್ ದಾಖಲೆ ನಿರ್ಮಿಸಿದ್ದಾರೆ. ಈಗ ಆಕೆಯ ಒಟ್ಟು ಆಸ್ತಿ ಮೊತ್ತ 1.05 ಶತಕೋಟಿ ಡಾಲರ್‌ಗೆ ಏರಿದೆ. ಫೋರ್ಬ್ಸ್ ಪತ್ರಿಕೆಯ ಪ್ರಕಾರ, ಈ ವರ್ಷ ಒಟ್ಟು 268 ಜನ ಹೊಸಬರು ಜಾಗತಿಕ ಶತಕೋಟ್ಯಾಧಿಪತಿಗಳ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ. ಅವರಲ್ಲಿ 42 ಮಹಿಳೆಯರು. ಆದರೆ ಈ ಮಹಿಳೆಯರಲ್ಲಿ ಐವರು ಮಾತ್ರ ಸ್ವಂತ ಪರಿಶ್ರಮದಲ್ಲಿ ಶತಕೋಟ್ಯಾಧಿಪತಿಗಳಾದವರು. (ಉಳಿದವರೆಲ್ಲ ಅವರವರ ಉದ್ಯಮ ಕುಟುಂಬದ, ಪಿತ್ರಾರ್ಜಿತ ಸೊತ್ತನ್ನೇ ಬೆಳೆಸಿದವರು.) ಈ ಐವರಲ್ಲಿ ಮುಂಚೂಣಿಯಲ್ಲಿ ಇರುವವರು ಶೆರಿಲ್ ಸ್ಯಾಂಡ್‌ಬರ್ಗ್. (ಬರ್ತ್‌ಡೇ 28-8-1969) ಶೆರಿಲ್ ಅವರಲ್ಲಿ ಈಗ ಫೇಸ್‌ಬುಕ್‌ನ ಸುಮಾರು 12 ದಶಲಕ್ಷ ಷೇರುಗಳಿವೆಯಂತೆ. ಈ ವರ್ಷ ಫೇಸ್‌ಬುಕ್ ಕಂಪೆನಿಯ ಷೇರುಬೆಲೆ ಶೇಕಡಾ 130ರಷ್ಟು ಏರಿಕೆ ಕಂಡಿರುವುದರಿಂದ ಆಸ್ತಿ ಮೌಲ್ಯ ಬೇಡವೆಂದರೂ ದುಪ್ಪಟ್ಟಾಗಿದೆ. ವರ್ಷದ ಆರಂಭದಲ್ಲಿ ತಮ್ಮಲ್ಲಿದ್ದ ಷೇರುಗಳಲ್ಲಿ ಅರ್ಧ ಭಾಗವನ್ನು ಮಾರಿದ್ದರೂ, ಶೆರಿಲ್‌ಗೆ ಮೋಸವಾಗಿಲ್ಲ. ವಿಶ್ವದ 'ಸೆಲ್ಫ್‌ಮೇಡ್' ಶತಕೋಟ್ಯಾಧಿಪತಿಗಳ ಪೈಕಿ ಶೆರಿಲ್ ಅವರೇ ಅತ್ಯಂತ ಕಿರಿಯ ಮಹಿಳೆ.

ಹಾಗೆ ನೋಡಿದರೆ, 2014ರ ಉದ್ದಕ್ಕೂ ಶೆರಿಲ್ ಬಗ್ಗೆ ಉದ್ಯಮದ ವಿಶ್ಲೇಷಕರು ಹಲವು ಗಾಳಿಸುದ್ದಿಗಳನ್ನು ಹರಿಯಬಿಟ್ಟಿದ್ದರು. ಅದರಲ್ಲಿ ಮೊದಲನೆಯದು, 'ವರ್ಷದ ಕೊನೆಗೆ ಶೆರಿಲ್, ಫೇಸ್‌ಬುಕ್‌ಗೆ ವಿದಾಯ ಹೇಳುತ್ತಾರೆ' ಎನ್ನುವುದು! 'ಫೇಸ್‌ಬುಕ್ ಮಾಲೀಕ ಹಾಗೂ ಸಿಇಓ ಮಾರ್ಕ್ ಜೂಕರ್‌ಬರ್ಗ್‌ಗೆ ಇನ್ನೂ ವಯಸ್ಸಾಗಿಲ್ಲ. ಹಾಗಾಗಿ ಶೆರಿಲ್ ಇನ್ನೂ ಹಲವು ವರ್ಷಗಳ ಕಾಲ ಕಂಪೆನಿಯ ಸಿಇಓ ಆಗುವಂತಿಲ್ಲ. ಅವರು ಕೆಲಸ ಬಿಡಬಹುದು' ಎನ್ನುವುದು ಹಲವರ ಅಂದಾಜು ಆಗಿತ್ತು. ಹಾಗೆಯೇ ಇನ್ನೊಂದೆಡೆ, 'ಶೆರಿಲ್ ಸೆನೆಟ್ ಸದಸ್ಯೆ ಆಗುವುದು ಖಚಿತ. ರಾಜಕೀಯಕ್ಕೆ ಹೋಗುವುದರಿಂದ ಫೇಸ್‌ಬುಕ್‌ಗೆ ರಾಜೀನಾಮೆ ನೀಡಬಹುದು' ಎನ್ನುವುದು ಇನ್ನೊಂದು ಊಹೆಯಾಗಿತ್ತು. ಅದಕ್ಕೆ ತಕ್ಕಂತೆ, ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾ ಸಹಿತ ಹಲವು ಗಣ್ಯರು ಆಕೆಯ ಮನೆಗೆ ಭೇಟಿ ಕೊಟ್ಟಿದ್ದೂ ಸುದ್ದಿಗೆ ರೆಕ್ಕೆಪುಕ್ಕಗಳನ್ನು ಒದಗಿಸಿತ್ತು. ಈ ವರ್ಷ ಶೆರಿಲ್, ವಿಶ್ವದಾದ್ಯಂತ ಪ್ರವಾಸ ಮಾಡುತ್ತಾ ಹೆಣ್ಣುಮಕ್ಕಳ ದುಡಿಯುವ ಹಕ್ಕಿನ ಬಗ್ಗೆ, ಹೆಣ್ಣುಮಕ್ಕಳು ಕಂಪೆನಿಗಳಲ್ಲಿ ಉನ್ನತ ಹುದ್ದೆಗಳಿಗೆ ಏರುವ ಬಗ್ಗೆ ಹಲವು ಸ್ತ್ರೀವಾದಿ ಭಾಷಣಗಳನ್ನು ಕೊಟ್ಟದ್ದೂ ಈ ವಾದಕ್ಕೆ ಸಮರ್ಥನೆ ನೀಡಿತ್ತು. ಆದರೆ ಎಲ್ಲರ ಊಹೆಗಳೂ ಈಗ ಸುಳ್ಳಾಗಿವೆ. 'ಫೇಸ್‌ಬುಕ್ ಕಂಪೆನಿ ತೊರೆಯುವುದಿಲ್ಲ. ಅವೆಲ್ಲ ಸುದ್ದಿಗಳಿಗೆ ಆಧಾರವಿಲ್ಲ' ಎಂದು ಸ್ವತಃ ಶೆರಿಲ್ ವರ್ಷದ ಮಧ್ಯಭಾಗದಲ್ಲಿ ಹೇಳಿಕೆ ನೀಡಿದ್ದರು.

ಈ ಮಧ್ಯೆ ಲೇಖಕಿಯಾಗಿಯೂ ಶೆರಿಲ್ ಜನಪ್ರಿಯರಾಗಿದ್ದಾರೆ. ಕಳೆದ ವರ್ಷ ಅವರು ಬರೆದ 'ಲೀನ್ ಇನ್' ಎಂಬ ಪುಸ್ತಕ ಅತ್ಯಧಿಕ ಮಾರಾಟ ಕಂಡು ದಾಖಲೆ ನಿರ್ಮಿಸಿತು. ಈ ವರ್ಷ ಮತ್ತೆ 'ಲೀನ್ ಇನ್, ಫಾರ್ ಗ್ರಾಜುವೇಟ್ಸ್' ಎನ್ನುವ ಪುಸ್ತಕ ಬಿಡುಗಡೆಯಾಗಿ ಅದೂ ಅತ್ಯಧಿಕ ಮಾರಾಟ ಕಂಡಿತು. ಈ ಪುಸ್ತಕದ ಸಿನಿಮಾ ಹಕ್ಕುಗಳನ್ನು ಸೋನಿ ಕಂಪೆನಿ ಖರೀದಿಸಿದ್ದೂ ಸುದ್ದಿಯಾಯಿತು. ಯಶಸ್ಸಿನ ತುತ್ತತುದಿಯಲ್ಲಿ ಇರುವಾಗಲೇ ಕ್ಯಾಲಿಫೋರ್ನಿಯಾದಲ್ಲಿರುವ ತಮ್ಮ ಮನೆಯನ್ನು ಮಾರಾಟ ಮಾಡಿದ ಶೆರಿಲ್, ಏಳು ಬೆಡ್‌ರೂಮ್‌ಗಳ ವಿಶಾಲ ಹೊಸ ಬಂಗಲೆಗೆ ಗಂಡ ಮಕ್ಕಳ ಜತೆ ಸ್ಥಳಾಂತರಗೊಂಡಿದ್ದಾರೆ. 2004ರಲ್ಲಿ 80 ಲಕ್ಷ ಡಾಲರ್‌ಗೆ ಖರೀದಿ ಮಾಡಿದ್ದ ಮನೆಯನ್ನು, ಕಳೆದ ವರ್ಷ 92.5 ಲಕ್ಷ ಡಾಲರ್‌ಗೆ ಮಾರಾಟ ಮಾಡಿರುವ ಶೆರಿಲ್, ಹೊಸ ಬಂಗಲೆಯನ್ನು 1.1 ಕೋಟಿ ಡಾಲರ್‌ಗೆ ಖರೀದಿಸಿದ್ದಾರಂತೆ.



ಫೇಸ್‌ಬುಕ್ ಆದಾಯ ಹೆಚ್ಚಿಸುವಲ್ಲಿ ಶೆರಿಲ್ ಮಹತ್ವದ ಪಾತ್ರ ವಹಿಸಿರುವುದು ನಿಜ. ಮುಖ್ಯವಾಗಿ ಸಾಮಾಜಿಕ ಜಾಲತಾಣ ಕ್ಷೇತ್ರದಲ್ಲಿ ಟ್ವಿಟ್ಟರ್, ಇನ್ಸ್‌ಟಾಗ್ರಾಮ್‌ಗಳ ತೀವ್ರ ಪೈಪೋಟಿಯ ನಡುವೆಯೂ ಫೇಸ್‌ಬುಕ್ ಮುನ್ನಡೆದಿದೆ. ವರ್ಷದ ಕೊನೆಗೆ, ಗ್ರಾಹಕರ ಅನುಮತಿಯಿಲ್ಲದೆ ಅವರನ್ನು ಉತ್ಪನ್ನಗಳ ಸಮೀಕ್ಷೆಗೆ ಬಳಸಿಕೊಂಡ ಅನೈತಿಕ ಕ್ರಮಕ್ಕೆ ವಿಷಾದ ವ್ಯಕ್ತಪಡಿಸಿದ್ದನ್ನು ಬಿಟ್ಟರೆ, ಶೆರಿಲ್ ನಡೆಯಲ್ಲಿ ಬೇರೆ ಯಾವುದೇ ಹಿನ್ನಡೆ ಕಂಡುಬಂದಿಲ್ಲ. ಸದ್ಯ ಫೇಸ್‌ಬುಕ್‌ನ ಬಳಕೆದಾರರಲ್ಲಿ ಶೇಕಡಾ 80ರಷ್ಟು ಗ್ರಾಹಕರು ಅಮೆರಿಕ ಮತ್ತು ಕೆನಡಾದ ಹೊರಗೆ ಇರುವುದೂ ಫೇಸ್‌ಬುಕ್ ಮಾರುಕಟ್ಟೆ ಸಾಮರ್ಥ್ಯಕ್ಕೆ ಶಕ್ತಿ ಒದಗಿಸಿದೆ. 2005ರಿಂದಲೂ ವಿಶ್ವದ ಪ್ರಭಾವಶಾಲಿ ಮಹಿಳೆಯರಲ್ಲಿ ಒಬ್ಬರಾಗಿ, ನಿರಂತರ ಆ ಸ್ಥಾನವನ್ನು ಉಳಿಸಿಕೊಂಡಿರುವುದು ಕಡಿಮೆ ಸಾಧನೆಯೇನಲ್ಲ. ಅಮೆರಿಕದ ರಾಜಕೀಯವನ್ನು ಉದ್ಯಮಪತಿಗಳೇ ನಿಯಂತ್ರಣದಲ್ಲಿ ಇರಿಸಿಕೊಂಡಿರುವಾಗ, ನೇರ ರಾಜಕೀಯಕ್ಕೆ ಪ್ರವೇಶಿಸುವುದೂ ಜಾಣತನದ ಕ್ರಮವಲ್ಲ ಎನ್ನುವ ಶೆರಿಲ್ ನಿಲುವು ಸರಿ ಇದ್ದಂತಿದೆ. ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65